## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **645 (569)** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **20.02.2024** |
| **ಉತ್ತರಿಸುವ ಸಚಿವರು** | : | **ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕೆ.ಐ.ಎ.ಡಿ.ಬಿ ಯಿಂದ ಎಷ್ಟು ಭೂಮಿಯನ್ನು ವಶಪಡಿಸಿಕೊಂಡಿದೆ; (ಗ್ರಾಮವಾರು ಮಾಹಿತಿ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ 3613-06 ಎ-ಗು ಮತ್ತು ಏಕಘಟಕ ಸಂಕೀರ್ಣಗಳಿಗಾಗಿ 15-37 ಎ-ಗು ಜಮೀನು ಸೇರಿ ಒಟ್ಟು 3629-03 ಎ–ಗು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಗ್ರಾಮವಾರು ವಿವರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ. |
| ಆ | ಕೆ.ಐ.ಎ.ಡಿ.ಬಿಯ ಕೈಗಾರಿಕಾ ಉದ್ದೇಶಕ್ಕಾಗಿ ಭೂಮಿಯನ್ನು ವಶಪಡಿಸಿಕೊಳ್ಳುವಾಗ ಅನುಸರಿಸುವ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು) | ಕೆ.ಐ.ಎ.ಡಿ.ಬಿ. ವತಿಯಿಂದ ಭೂಸ್ವಾಧೀನಪಡಿಸಿ ಕೊಳ್ಳುವಾಗ ಕೈಗಾರಿಕಾ ಜಮೀನುಗಳಿಗೆ ಇರುವ ಬೇಡಿಕೆಗಳಿಗೆ ಅನುಗುಣವಾಗಿ ಮಂಡಳಿಯ ಕಾರ್ಯಪಾಲಕ ಅಭಿಯಂತರರು, ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಂಬಂಧಪಟ್ಟ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಸಹಯೋಗದೊಂದಿಗೆ ನಿರ್ದಿಷ್ಠ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಜಮೀನುಗಳನ್ನು ಗುರುತಿಸಿದ ನಂತರ, ಮಂಡಳಿ ಸಭೆಯ ಅನುಮೋದನೆ ಪಡೆದು, ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ಕಾರವು ದಿನಾಂಕ:18-03-2013ರಂದು ಹೊರಡಿಸಿರುವ ಸುತ್ತೋಲೆಯಲ್ಲಿನ ನಿರ್ದೇಶನದನುಸಾರ ಜಮೀನನ್ನು ಭೂಸ್ವಾಧೀನಪಡಿಸಲು ಕ್ರಮ ವಹಿಸಲಾಗುತ್ತಿದೆ. ಸುತ್ತೋಲೆ ಪ್ರತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

| | | |
|---|---|---|
| ಇ | ಸ್ವಾಧೀನಕ್ಕೂ ಮುನ್ನ ಕೈಗಾರಿಕೆಗಳಿಗೆ ಎಷ್ಟು ಭೂಮಿ ಅಗತ್ಯವಿದೆ ಎಂಬುದರ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳಲ್ಲಿ ಅಧ್ಯಯನ ನಡೆಸಿದೆಯೇ; (ವರದಿಯ ವಿವರಗಳನ್ನು ನೀಡುವುದು) | ಕೈಗಾರಿಕಾ ಉದ್ದೇಶಕ್ಕಾಗಿ ಭೂಮಿಯನ್ನು ವಶಪಡಿಸಿಕೊಳ್ಳುವ ಮುನ್ನಾ ವಿಶೇಷ ಭೂಸ್ವಾಧೀನಾದಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು, ತಪಾಸಕರು ಮತ್ತು ಭೂಮಾಪಕರು ಸದರಿ ಜಾಗ ಕೈಗಾರಿಕೆ ಸ್ಥಾಪಿಸಲು ಯೋಗ್ಯವೇ ಹಾಗೂ ಇತರೆ ಮೂಲಭೂತ ಸೌಕರ್ಯ ಹೊಂದಿದೆಯೇ ಎಂಬ ಬಗ್ಗೆ ಜಂಟಿ ಸ್ಥಳ ತನಿಖೆ ನಡೆಸಿ ನಕ್ಷೆಯೊಂದಿಗೆ ವರದಿ ಸಲ್ಲಿಸುತ್ತಾರೆ.<br><br>ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರ, ಜಂಟಿ ನಿರ್ದೇಶಕರವರಿಂದ ಸದರಿ ಜಾಗವು ಭೂಸ್ವಾಧೀನಪಡಿಸಿಕೊಳ್ಳಲು ಯೋಗ್ಯವೇ ಹಾಗೂ ಸದರಿ ಜಾಗಕ್ಕೆ ಉದ್ದಿಮೆದಾರರ ಬೇಡಿಕೆಯ ಬಗ್ಗೆ ವರದಿ ಪಡೆದು, ತದನಂತರ ಜಂಟಿ ಸ್ಥಳ ತನಿಖೆ ವರದಿ, ನಕ್ಷೆ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರದಿಂದ ಬಂದ ಪತ್ರದೊಂದಿಗೆ ಸದರಿ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆಯಲಾಗುತ್ತದೆ. |
| ಈ | ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು? (ವಿವರ ನೀಡುವುದು) | ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ, ಅಂತಿಮ ಅಧಿಸೂಚನೆ ಹೊರಡಿಸಲು ಒಟ್ಟು 4717-27 ಎ-ಗು ಜಮೀನು ಬಾಕಿ ಇರುತ್ತದೆ. ವಿವರಗಳನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಸಿಐ 79 ಐಎಪಿ 2024**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**

(ಅನುಬಂಧ–1)

## ಕಳೆದ 2 ವರ್ಷಗಳ ಅವಧಿಯಲ್ಲಿ ಕೈಗಾರಿಕಾ ಪ್ರದೇಶಗಳಿಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ವಿವರ.

ಕೈಗಾರಿಕಾ ಪ್ರದೇಶಃ–

| ಕ್ರ ಸಂ | ಕೈಗಾರಿಕಾ ಪ್ರದೇಶದ ಹೆಸರು | ಗ್ರಾಮ | ವಿಸ್ತೀರ್ಣ ಎ–ಗು | ಜಂಟಿ ಸ್ಥಳ ತನಿಖಾ ವರದಿ/ ದಿನಾಂಕ | ಮಂಡಳಿ ಸಭೆ ಅನುಮೋದನೆ ದಿನಾಂಕ | ಅಂತಿಮ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: |
|---|---|---|---|---|---|---|
| ಬೆಂಗಳೂರು ನಗರ ಜಿಲ್ಲೆ | | | | | | |
| 1 | ಕೈ.ಪ್ರ. | ಹೂವಿನಾಯಕನಹಳ್ಳಿ | 2–10 | 16–11–2021 | 15–09–2012 | ಸಿಐ 55 ಎಸ್‌ಪಿಕ್ಯೂ (ಇ) 2021 ದಿನಾಂಕ: 29–03–2021 |
| 2 | ಕೈ.ಪ್ರ. | ಹೂವಿನಾಯಕನಹಳ್ಳಿ | 7–22 | 23–06–2021 | 28–06–2004 | ಸಿಐ 136 ಎಸ್‌ಪಿಕ್ಯೂ (ಇ) 2019 ದಿನಾಂಕ: 04–11–2021 |
| 3 | ಕೈ.ಪ್ರ. ಬೆಂಗಳೂರು ಉತ್ತರ(ಅಪರ) | ಬಾಗಲೂರು | 4–00 | 24–11–2017 | 28–06–2004 | ಸಿಐ 204 ಎಸ್‌ಪಿಕ್ಯೂ (ಇ) 2021 ದಿನಾಂಕ:12–01–2022 |
| 4 | ಕೈ.ಪ್ರ. | ಅರೆಬಿನ್ನಮಂಗಲ | 5–05 | 05–05–2021 | 01–07–2006 | ಸಿಐ 153 ಎಸ್‌ಪಿಕ್ಯೂ (ಇ) 2021 ದಿನಾಂಕ: 10–10–2022 |
| 5 | ಕೈ.ಪ್ರ. | ಬಾಗಲೂರು ಯಲಹಂಕ | 10–29 | 03–11–2021 | 28–06–2004 | ಸಿಐ 84 ಎಸ್‌ಪಿಕ್ಯೂ(ಇ) 2022 ದಿನಾ0ಕ 10.10.2022 |
| | | ಒಟ್ಟು | **29–26** | | | |
| ಬೆಂಗಳೂರು ಗ್ರಾಮಾಂತರ ಜಿಲ್ಲೆ | | | | | | |
| 1 | ದಾಬಸ್‌ಪೇಟೆ 4 & 5ನೇ ಹಂತದ ಮಧ್ಯದ ಜಮೀನುಗಳು | ಬಿಲ್ಲನಕೋಟೆ ಇತ್ಯಾದಿ | 265–29 | 26–02–2015 | 04–02–2017 | ಸಿಐ 72 ಎಸ್‌ಪಿಕ್ಯೂ 2019 ದಿನಾಂಕ: 19–05–2021 |
| 2 | ದೇವನಹಳ್ಳಿ ತಾ॥ ಚನ್ನರಾಯಪಟ್ಟಣ | ಪಾಳ್ಯ ಗ್ರಾಮ | 8–28 | 27–03–2012 | 02–03–2013 | ಸಿಐ 93 ಎಸ್‌ಪಿಕ್ಯೂ (ಇ) 2021 ದಿನಾಂಕ:28–06–2021 |
| 3 | ನೆಲಮಂಗಲ ಒಬಳಾಪುರ ಕೈ.ಪ್ರ. | ಓಬಳಾಪುರ & ಇತರೆ ಗ್ರಾಮಗಳು | 842–17 | 16–10–2020 | 28–10–2020 | ಸಿಐ 242 ಎಸ್‌ಪಿಕ್ಯೂ (ಇ) 2020 ದಿನಾಂಕ: 12–08–2021 |
| 4 | ಹರಳೂರು ಕೈ.ಪ್ರ. | ಹರಳೂರು ಗ್ರಾಮ | 13–32 | 27–03–2012 | 02–03–2013 | ಸಿಐ 72 ಎಸ್‌ಪಿಕ್ಯೂ (ಇ) 2021 ದಿನಾಂಕ: 12–11–2021 |
| 5 | ಕೈಗಾರಿಕಾ ಪ್ರದೇಶ | ಕೆ.ಜಿ. ಶ್ರೀನಿವಾಸಪುರ ನೆಲಮಂಗಲ | 1–04 | 04–03–2021 | 06–03–2021 | ಸಿಐ 119 ಎಸ್‌ಪಿಕ್ಯೂ(ಇ) 2021 ದಿನಾ0ಕ 18.05.2022 |
| 6 | ಐಟಿಐಆರ್ ಕೈಗಾರಿಕಾ ಪ್ರದೇಶ | ಬೈರದೇನಹಳ್ಳಿ ಇತ್ಯಾದಿ ಗ್ರಾಮ | 867–37 | 01–06–2010 | 05–10–2009 | ಸಿಐ 116 ಎಸ್‌ಪಿಕ್ಯೂ(ಇ) 2022 ದಿನಾಂಕ 26.05.2022 |
| | ಪೋಲನಹಳ್ಳಿ ಕೈಗಾರಿಕಾ ಪ್ರದೇಶ | ಪೋಲನಹಳ್ಳಿ, ದೇವನಹಳ್ಳಿ | 0–32 | 27–03–2012 | 02–03–2013 | ಸಿಐ 159 ಎಸ್‌ಪಿಕ್ಯೂ(ಇ) 2022 ದಿನಾಂಕ 20.07.2022 |

| ಕ್ರ ಸಂ | ಕೈಗಾರಿಕಾ ಪ್ರದೇಶದ ಹೆಸರು | ಗ್ರಾಮ | ವಿಸ್ತೀರ್ಣ ಎ–ಗು | ಜಂಟಿ ಸ್ಥಳ ತನಿಖಾ ವರದಿ/ ದಿನಾಂಕ | ಮಂಡಳಿ ಸಭೆ ಅನುಮೋದನೆ ದಿನಾಂಕ | ಅಂತಿಮ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: |
|---|---|---|---|---|---|---|
| 8 | ಕೈಗಾರಿಕಾ ಪ್ರದೇಶ | ಬಿಲ್ಲಿನಕೋಟೆ ನೆಲಮಂಗಲ | 0–10 | 07–07–2022 | 21–07–2007 | ಸಿಐ 243 ಎಸ್‌ಪಿಕ್ಯೂ(ಇ) 2022 ದಿನಾಂಕ 06.09.2022 |
| 9 | ಕೈಗಾರಿಕಾ ಪ್ರದೇಶ | ಮಾವಿನಕುಂಟೆ ಗೋರಘಟ್ಟ ನೆಲಮಂಗಲ | 492–10 | 28–10–2020 | 17–10–2020 | ಸಿಐ 13 ಎಸ್‌ಪಿಕ್ಯೂ(ಇ) 2021 ದಿನಾಂಕ 23.02.2023 |
| 10 | ಕೈಗಾರಿಕಾ ಪ್ರದೇಶ | ಆದಿನಾರಾಯಣ ಹೊಸಹಳ್ಳಿ ನಾಗದೇನಹಳ್ಳಿ ಕೊನೆಘಟ್ಟ ದೊಡ್ಡಬಳ್ಳಾಪುರ | 971–24 | 15–06–2021 | 18–06–2021 | ಸಿಐ 17 ಎಸ್‌ಪಿಕ್ಯೂ(ಇ) 2022 ದಿನಾಂಕ 27.02.2023 |
| 11 | ಕೈಗಾರಿಕಾ ಪ್ರದೇಶ | ಬೀರಸಂದ್ರ ಬೈರದೇನಹಳ್ಳಿ ನಾಗದೇನಹಳ್ಳಿ ದೇವನಹಳ್ಳಿ ತಾ. | 118–37 | 12–11–2021 | 06–05–2021 | ಸಿಐ 1798 ಎಸ್‌ಪಿಕ್ಯೂ(ಇ) 2023 ದಿನಾಂಕ 07.03.2023 |
| | | ಒಟ್ಟು | **3583–20** | | | |
| | | ಒಟ್ಟು ಜುಮ್ಲಾ | **3613-06** | | | |

<u>ಏಕಘಟಕ ಸಂಕೀರ್ಣ–</u>

| ಕ್ರ ಸಂ | ಏಕಘಟಕ ಸಂಕೀರ್ಣ ಹೆಸರು | ಗ್ರಾಮ, ತಾಲ್ಲೂಕು | ವಿಸ್ತೀರ್ಣ ಎ–ಗು | ಜಂಟಿ ಸ್ಥಳ ತನಿಖಾ ವರದಿ / ದಿನಾಂಕ | ಮಂಡಳಿ ಸಭೆ ಅನುಮೋದನೆ ದಿನಾಂಕ | ಅಂತಿಮ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: |
|---|---|---|---|---|---|---|
| **ಬೆಂಗಳೂರು ನಗರ ಜಿಲ್ಲೆ** | | | | | | |
| 1 | ಏರ್‌ಪೋರ್ಟ್ ಕಾರ್ಗೋ ರಸ್ತೆ | ಚಿಕ್ಕನಹಳ್ಳಿ | 0–02 | 17–12–2020 | 16–09–2016 | ಸಿಐ 18 ಎಸ್‌ಪಿಕ್ಯೂ (ಇ) 2021 ದಿನಾ0ಕಃ20–05–2021 |
| 2 | ಏರ್‌ಪೋರ್ಟ್ ಕಾರ್ಗೋ ರಸ್ತೆ | ಬೇಗೂರು | 0–04 | 28–12–2020 | 16–09–2016 | ಸಿಐ 16 ಎಸ್‌ಪಿಕ್ಯೂ (ಇ) 2021 ದಿನಾಂಕ:27–08–2021 |
| **ಬೆಂಗಳೂರು ಗ್ರಾಮಾಂತರ ಜಿಲ್ಲೆ** | | | | | | |
| 1 | ಬಮೂಲ್ | ದೊಡ್ಡಬಳ್ಳಾಪುರ ಮೆಣಸಿ | 15–31 | 05–01–2023 | ಸರ್ಕಾರಿ ಆದೇಶ ಸಂಖ್ಯೆ:ಸಿಐ 363 ಎಸ್‌ಪಿಐ 2022 ದಿ:10–11–2022 | ಸಿಐ 46 ಎಸ್‌ಪಿಕ್ಯೂ (ಇ) 2023 ದಿನಾ0ಕಃ01–01–2024 |
| | | ಒಟ್ಟು ಜುಮ್ಲಾ | **15–37** | | | |

**ವಿಶೇಷ ಜಿಲ್ಲಾಧಿಕಾರಿ**

ಅನುಬಂಧ-02

-146-

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 590 ಎಸ್‌ಪಿಕ್ಯೂ 2012

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 18.03.2013

## ಸುತ್ತೋಲೆ

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಲು ಅನುಸರಿಸಬೇಕಾದ ವಿಧಾನಗಳ ಬಗ್ಗೆ

* * * *

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ / ಏಕ ಘಟಕ ಸಂಕೀರ್ಣ ಯೋಜನೆಗಳಿಗಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿದ್ದು, ಈ ಕೆಳಕಂಡ ಪ್ರಕರಣಗಳಲ್ಲಿ ಸರಿಯಾಗಿ ಪರಿಶೀಲಿಸದೆಯೇ ಕೆ.ಐ.ಎ.ಡಿ.ಬಿ.ಯು ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

1. ಕೆ.ಐ.ಎ.ಡಿ. ಕಾಯ್ದೆ ಕಲಂ 28(1)ರ ಪ್ರಾಥಮಿಕ ಅಧಿಸೂಚನೆಯಲ್ಲಿ ದೇವಸ್ಥಾನ, ಶಾಲೆಗಳು, ಸ್ಮಶಾನಗಳು ಮತ್ತು ವಾಸದ ಮನೆಗಳು ಸೇರಿರುತ್ತವೆ.
2. ಹಾಲಿ ನಡೆಯುತ್ತಿರುವ ವಿವಿಧ ಕೈಗಾರಿಕೆಗಳು / ರೋಗಗ್ರಸ್ಥ ಕೈಗಾರಿಕಾ ಘಟಕಗಳು ಹೊಂದಿರುವ ಜಮೀನುಗಳು ಸೇರಿರುತ್ತವೆ.
3. ಸ್ಥಳೀಯ ಯೋಜನಾ ಪ್ರಾಧಿಕಾರಗಳು ವಸತಿ ಉದ್ದೇಶಕ್ಕೆ ಅನುಮೋದಿಸಲ್ಪಟ್ಟಿರುವ ಜಮೀನುಗಳು / ಸರ್ಕಾರದ ಭೂ ಬದಲಾವಣೆಗೊಂಡಿರುವ ಜಮೀನುಗಳು / ಜಿಲ್ಲಾಧಿಕಾರಿಗಳು ಭೂ ಪರಿವರ್ತನೆ ನೀಡಿರುವ ಪ್ರಕರಣಗಳಿಗೆ ಸಂಬಂಧಿಸಿದ ಜಮೀನುಗಳು ಸೇರಿರುತ್ತವೆ.
4. ತೋಟಗಳು, ಫಲವತ್ತಾದ ಜಮೀನು ಹಾಗೂ ವರ್ಷಕ್ಕೆ 2 ಬೆಳೆ ಬೆಳೆಯುವ ಜಮೀನುಗಳು, ತರಿ ಜಮೀನುಗಳು ಸೇರಿರುತ್ತವೆ.

ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರಡಿ ಅಂತಿಮ ಅಧಿಸೂಚನೆಯನ್ನು ತಯಾರಿಸುವಾಗ ಮೇಲೆ ಹೇಳಿದ ಜಮೀನುಗಳನ್ನು ಹೊರತುಪಡಿಸಿ, ಕೆ.ಐ.ಎ.ಡಿ. ಕಾಯ್ದೆ ಕಲಂ 4ರಡಿ ಅಧಿಸೂಚನೆಯನ್ನು ಹೊರಡಿಸಲಾಗುತ್ತಿದೆ. ಇದರಿಂದಾಗಿ ಪ್ರಾಥಮಿಕ ಅಧಿಸೂಚನೆ ವಿಸ್ತೀರ್ಣಕ್ಕೂ, ಅಂತಿಮ ಅಧಿಸೂಚನೆಯಲ್ಲಿನ ವಿಸ್ತೀರ್ಣಕ್ಕೂ ವ್ಯತ್ಯಾಸ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ನ್ಯೂನತೆಗಳನ್ನು ಸರಿಪಡಿಸಲು ಈ ಹಿಂದೆ ದಿನಾಂಕ: 03.03.2007ರಂದು ಹೊರಡಿಸಲಾದ ಸುತ್ತೋಲೆ ಸಂಖ್ಯೆ ಸಿಐ 151 ಎಸ್‌ಪಿಕ್ಯೂ 2007ನ್ನು ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ಭಾಗಶಃ ಮಾರ್ಪಡಿಸಲಾಗಿದೆ.

ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಉದ್ದೇಶಕ್ಕೆ / ಏಕ ಘಟಕ ಸಂಕೀರ್ಣ ಯೋಜನೆಗಳಿಗೆ ಜಮೀನುಗಳನ್ನು ಭೂಸ್ವಾಧೀನಪಡಿಸಲು ಪ್ರಾಥಮಿಕ ಅಧಿಸೂಚನೆಯನ್ನು ತಯಾರಿಸುವ ಸಂದರ್ಭದಲ್ಲಿ ಇನ್ನು ಮುಂದೆ ಈ ಕೆಳಕಂಡ ವಿಧಾನವನ್ನು ಪಾಲಿಸಲು ಈ ಮೂಲಕ ಸೂಚಿಸಲಾಗಿದೆ.:

1. ಪ್ರಾಥಮಿಕ ಅಧಿಸೂಚನೆ ಪ್ರಸ್ತಾವನೆಯನ್ನು ಸಿದ್ಧಪಡಿಸುವ ಮೊದಲು ವಿಶೇಷ ಭೂಸ್ವಾಧೀನಾಧಿಕಾರಿಯವರು ಪ್ರಸ್ತಾಪಿತ ಜಮೀನಿನ ಮೇಲ್ಮೈ ಲಕ್ಷಣಗಳ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದ ನಂತರ ಸ್ಥಳ ತನಿಖಾ ಟಿಪ್ಪಣಿ ಸಹಿತ ಪ್ರಾಥಮಿಕ ಅಧಿಸೂಚನೆ ಪ್ರಸ್ತಾವನೆಯನ್ನು ಸಲ್ಲಿಸುವುದು ಹಾಗೂ ಅಂತಿಮ ಅಧಿಸೂಚನೆ ಹೊರಡಿಸುವ ಮೊದಲು ಜಂಟಿ ಅಳತೆ ಕಾರ್ಯವನ್ನು ಪೂರೈಸಿ, ನಂತರ ಅಂತಿಮ ಅಧಿಸೂಚನೆ ಪ್ರಸ್ತಾವನೆ ಸಿದ್ಧಪಡಿಸುವುದು.
2. ದೇವಸ್ಥಾನ, ಸ್ಮಶಾನ, ಶಾಲೆ ಮತ್ತು ಆಟದ ಮೈದಾನ, ವಾಸದ ಮನೆಗಳು / ವಸತಿ ಪ್ರದೇಶಗಳನ್ನು ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ಸಾಧ್ಯವಾದಷ್ಟು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು.
3. ಹಾಲಿ ನಡೆಯುತ್ತಿರುವ ವಿವಿಧ ಕೈಗಾರಿಕೆಗಳು, ರೋಗಗ್ರಸ್ಥ ಕೈಗಾರಿಕಾ ಘಟಕಗಳ ಪ್ರದೇಶಗಳನ್ನು ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ಸಾಧ್ಯವಾದಷ್ಟು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು.
4. ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ತೋಟಗಳು, ಫಲವತ್ತಾದ ಜಮೀನು ಹಾಗೂ ವರ್ಷಕ್ಕೆ 2 ಬೆಳೆ ಬೆಳೆಯುವ ಜಮೀನುಗಳು, ತರಿ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು.
5. ಗ್ರಾಮಠಾಣಾದ ಸರಹದ್ದಿನಿಂದ ಗ್ರಾಮದ ಸುತ್ತಲೂ ವಿಸ್ತರಣೆಗಾಗಿ 100 ಮೀಟರ್ ವ್ಯಾಪ್ತಿಯ ಜಮೀನುಗಳನ್ನು ಹೊರತುಪಡಿಸುವುದು.

(ಪಿ.ಪಿ. ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪ್ರತಿಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನೃಪತುಂಗ ರಸ್ತೆ, ಬೆಂಗಳೂರು.

(ಅನುಬಂಧ-3)

**ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇರುವ ಪ್ರಕರಣಗಳ ವಿವರ.**

| ಕ್ರ ಸಂ | ತಾಲ್ಲೂಕು | ಗ್ರಾಮಗಳ ಹೆಸರು | ವಿಸ್ತೀರ್ಣ (ಎ–ಗು) |
|---|---|---|---|
| | | ಬೆಂಗಳೂರು ನಗರ ಜಿಲ್ಲೆ | |
| 1 | ಬೆಂಗಳೂರು | ಚಲಮನಕುಂಟೆ | 489–13 |
| | | ಬೆಂಗಳೂರು ಗ್ರಾಮಾಂತರ ಜಿಲ್ಲೆ | |
| 2 | ದೇವನಹಳ್ಳಿ ತಾ॥ ಐ.ಟಿ.ಐ.ಆರ್. ಕೈ.ಪ್ರ. | ರಬನಹಳ್ಳಿ, ರಾಮನಾಥಪುರ ಮತ್ತು ಇತರೆ ಗ್ರಾಮಗಳು | 1205–00 |
| 3 | ದೇವನಹಳ್ಳಿ ತಾ॥ ಪಾಳ್ಯ 2ನೇ ಹಂತ | ಹರಳೂರು, ಹ್ಯಾಡಾಳ, ಶೋತ್ರಿಯತೆಲ್ಲೂಹಳ್ಳಿ & ಇತರೆ 10 ಗ್ರಾಮಗಳು | 1772-02 |
| 4 | ನೆಲಮಂಗಲ/ ದೊಡ್ಡಬಳ್ಳಾಪುರ | ಹುಲಿಕುಂಟೆ | 227–00 |
| 5 | ನೆಲಮಂಗಲ | ದಾಬಸ್‌ಪೇಟೆ(ಹೆಚ್ಚುವರಿ), ಕಂಬಾಳು, ಮಾಚನಹಳ್ಳಿ, ಘಂಟೆಹೊಸಹಳ್ಳಿ, ಕಾಸರಘಟ್ಟ | 525–17 |
| 6 | ನೆಲಮಂಗಲ / ದೊಡ್ಡಬಳ್ಳಾಪುರ | ಹುಲಿಕುಂಟೆ(ಹೆಚ್ಚುವರಿ), ಜೋಯಿಸಲಗ್ರಹಾರ ಮತ್ತು ತರಬನಹಳ್ಳಿ | 498–35 |
| | | ಒಟ್ಟು | **4717-27** |

**ವಿಶೇಷ ಜಿಲ್ಲಾಧಿಕಾರಿ**